ಶ್ರೀಮತಿ ಸುಮಾ ವಸಂತ್ (ಕೈಗಾರಿಕಾ ಖಾತೆಯ ಉಪ ಸಚಿವರು)— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಕೈಗಾರಿಕಾ ವಸಾಹತುವನ್ನು ಸ್ಥಾಪಿಸುವ ಯೋಜನೆ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಕ್ಕೆ ಇದೆ. ಈ ಬಗ್ಗೆ ೧೯೮೪-೮೫ರಿಂದ ಸೂಕ್ತವಾದ ಸ್ಥಳವನ್ನು ಗುರುತಿಸಿ ಅದನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ಹಾಕಿಕೊಂಡಿದೆ. ಆದರೆ ಈ ಹಿಂದೆ ಬಂಟ್ವಾಳ ತಾಲ್ಲೂಕು ವಾಮನಪದವು ಎಂಬ ಹಳ್ಳಿಯಲ್ಲಿ ೩೫ ಎಕರೆ ಜಮೀನನ್ನು ಪಡೆಯಲು ಪ್ರಯತ್ನ ಮಾಡಲಾಗಿತ್ತು. ಆದರೆ, ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರು ಈ ಜಮೀನು ಕೈಗಾರಿಕಾ ಅಭಿವೃದ್ಧಿಗೆ ಸೂಕ್ತವಾಗಿಲ್ಲವೆಂದು ತಿಳಿಸಿ ಬೇರೆ ಕೈಗಾರಿಕಾ ಅಭಿವೃದ್ಧಿಗೆ ಸೂಕ್ತವಾಗುವ ಜಮೀನನ್ನು ಗುರುತಿಸಲು ಕ್ರಮ ಕೈಗೊಂಡಿದ್ದಾರೆ. ಇದರಂತೆ ಬೆಂಜಿನಪದವು ಎಂಬ ಹಳ್ಳಿಯಲ್ಲಿ ಸುಮಾರು ೭೦೦ರಿಂದ ೮೦೦ ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶವಾಗಿ ಪರಿವರ್ತಿಸಲು ಜಮೀನನ್ನು ಗುರುತಿಸಿದ್ದು ಇದರ ಸಾಧಕ ಭಾದಕಗಳನ್ನು ಪರಿಶೀಲಿಸುತ್ತಿದ್ದಾರೆ. ಈ ಜಮೀನು ರಾಷ್ಟ್ರೀಯ ಹೆದ್ದಾರಿಯಿಂದ ಸುಮಾರು ೫ ಅಥವಾ ೬ ಕಿ. ಮೀ. ದೂರವಿದ್ದು, ಈ ಪ್ರದೇಶಕ್ಕೆ ನೀರಿನ ಕೊರತೆ ಇದ್ದು, ನೀರನ್ನು ತುಂಬೆಯಿಂದ ಪಡೆಯಲು ಯೋಜಿಸಿದಲ್ಲಿ ಕೈಗಾರಿಕಾ ಪ್ರದೇಶದ ಪಂಪ್ಡ್ ವಸಾಹತುವಿನ ನಿರ್ಮಾಣದ ವೆಚ್ಚ ಬಹಳ ದುಬಾರಿಯಾಗುವುದರಿಂದ, ಈ ಯೋಜನೆಯನ್ನು ಕೈಗೊಳ್ಳಬೇಕಾದಲ್ಲಿ ಈ ಎಲ್ಲಾ ವಿಚಾರಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಸೂಕ್ತವಾದ ಸ್ಥಳ ಪರಿಶೀಲನೆಯ ನಂತರ, ಕೈಗಾರಿಕಾ ವಸಾಹತುವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಈ ಮೂಲಕ ತಿಳಿಸಲಿಚ್ಛಿಸುತ್ತೇನೆ.

(vi) ಹನೂರಿಗೆ ಕುಡಿಯುವ ನೀರಿನ ಸರಬರಾಜು

ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಮುಖ್ಯ ಕೇಂದ್ರವಾದ ಹನೂರಿನಲ್ಲಿ ಕಳೆದ ಕೆಲವು ದಿನಗಳಿಂದಲೂ ಕುಡಿಯುವ ನೀರಿನ ಅಭಾವ ಆಗಿ ಜನಗಳು ಒಂದು ಬಕೆಟ್ಟು ನೀರಿಗೆ ಒಂದು ರೂಪಾಯಿನಂತೆ ಕೊಟ್ಟು ಕುಡಿಯುತ್ತಿದ್ದಾರೆ. ಪಟ್ಟಣದ ಐದು ಕಿಲೋಮೀಟರ್ ದೂರದಿಂದ ನೀರು ಸರಬರಾಜು ಆಗುತ್ತಿರುವಲ್ಲಿ ಅನೇಕ ಕಡೆ ಹಾಕಿರುವ ಪೈಪುಗಳಿಂದ ನೀರು ಸೋರಿಹೋಗಿ ಎಷ್ಟು ಪಂಪು ಮಾಡಿದರೂ ನೀರಿನ ಟ್ಯಾಂಕು ತುಂಬುವುದಿಲ್ಲ. ಅವನ್ನು ಜನಾರೋಗ್ಯ ಇಲಾಖೆಯವರಿಂದ ಹನೂರು ಮಂಡಲ ಪಂಚಾಯ್ತಿಗೆ ಒಪ್ಪಿಸಲು ಮುಂದೆ ಬಂದಿದ್ದಾರೆ. ಆದರೆ ಮಂಡಲ ಪಂಚಾಯ್ತಿಯವರು ನೀರು ಸರಬರಾಜು ಮಾಡುವ ಪೈಪುಗಳು ಕಳಪೆ ಮಟ್ಟದವು ನೀರು ಬಹಳ ಸೋರಿ ಹೋಗುತ್ತದೆ ಅದನ್ನು ದುರಸ್ತು ಮಾಡಿ ನಮ್ಮ ಸುಪರ್ದಿಗೆ ಕೊಡಿರಿ ಎಂದು ಹೇಳುತ್ತಾರೆ. ಅವರು ನಾವು ಮಾಡುವುದಿಲ್ಲ ಎಂದು ಹಠ ಮಾಡುತ್ತಾರೆ. ಈ ಇಬ್ಬರ ತಕರಾರಿನಿಂದ ಊರಿನ ಜನಗಳು ನೀರಿಗಾಗಿ ಪರಿತಪಿಸುತ್ತಿದ್ದಾರೆ. ದಯವಿಟ್ಟು ತಾವು ಮೈಸೂರು ಜಿಲ್ಲಾ ಪರಿಷತ್ತಿಗೆ ತಂತಿ ಮೂಲಕ ಸಂದೇಶ ಕೊಟ್ಟು ಆದಷ್ಟು ಬೇಗನೆ ನೀರು ಸರಬರಾಜು ಆಗುವ ಪೈಪುಗಳನ್ನು ತೆಗೆದು ಬೇರೆ ಹಾಕಿಸಿ ನೀರು ಸೋರಿ ಹೋಗದಂತೆ ವ್ಯವಸ್ಥೆ ಮಾಡಿಕೊಡಬೇಕೆಂದು ಮಾನ್ಯ ಗ್ರಾಮಾಭಿವೃದ್ಧಿ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮಾಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೇಳಿರುವಂತೆ ನೀರು ಸಂಗ್ರಹವಾಗಲು ಪಂಪ್‌ಸೆಟ್ ಕೆಟ್ಟುಹೋಗಿದೆ. ಅದರ ಮೇಂಟೆನೆನ್ಸ್ ಯಾರು ಮಾಡಬೇಕೆಂದು ಸ್ವಲ್ಪ ಗೊಂದಲ ಇರುತ್ತದೆ. ಜವಾಬ್ದಾರಿ ಯಾರು ನಿರ್ವಹಿಸ ಬೇಕೆಂದು ಬಂದಿದೆ. ಆದುದರಿಂದ ರಿಪೇರಿ ಕೆಲಸ ಸ್ವಲ್ಪ ತಡವಾಗಿದೆ: ಆದರೂ ಕೂಡಾ ನಾವು ಮೈಸೂರು ಜಿಲ್ಲಾ ಪರಿಷತ್ ಚೀಫ್ ಸೆಕ್ರೆಟರಿಯವರಿಗೆ ಫೋನ್ ಮಾಡಿದಾಗ ಅವರು ಮೂರೇ ದಿನದಲ್ಲಿ ಇದನ್ನು ನಾವು ಸರಿಪಡಿಸುತ್ತೇವೆಂದರು. ಮತ್ತೆ ಮೇಂಟೆನೆನ್ಸ್ ಬಗ್ಗೆ ಏನಿದೆ ಪರಿಸ್ಥಿತಿ ಇದೆ ಇದು ಎಲ್ಲಾ ಕಡೆ ಇದೆ ಇದರ ಕಡೆ ಸರಕಾರ ಗಮನ ಕೊಡಬೇಕಾಗುತ್ತದೆ. ಈಗಿರತಕ್ಕಂಥ ವ್ಯವಸ್ಥೆ ಪ್ರಕಾರ ಓಲ್ಡ್ ಪೈಪ್ ವಾಟರ್ ಸಪ್ಲೈ ಮತ್ತೆ ಎರಡು ಮಿನಿ ವಾಟರ್ ಸಪ್ಲೈ ಅಥವಾ ಬೋರ್‌ವೆಲ್ಸ್ ಅಲ್ಲಿ ಉಂಟು. ಇದರಿಂದ ಸರಾಸರಿ ತಲಾ ಪ್ರಮಾಣ ದಿನಕ್ಕೆ ೧೪ ಲೀಟರ್ ನೀರು ಸಿಗುತ್ತಿದೆ.

ತಾವು ಹೇಳಿದ್ದು ನಿಜ, ಇದೊಂದು ಇಂಪ್ರೂವ್‌ಮೆಂಟ್ ಸ್ಕೀಮ್ ಎಂದು ಏನು ಮಾಡಿದರು, ಅದರ ಪ್ರಕಾರ ರಾಮನ ಗುಡ್ಡ ಎಂಬ ವ್ಯಾಲಿ ಇದೆ. ಅದು ೫ ಕಿಲೋ ಮೀಟರ್ ದೂರದಲ್ಲಿ ಇದೆ. ಅಲ್ಲಿ ೫ ಬೋರ್‌ವೆಲ್ಸ್ ಹಾಕಿ ನೀರು ತರುವ ಪ್ರಯತ್ನವನ್ನು ಯಶಸ್ವಿಯಾಗಿ ಏನು ಮಾಡಿದರು, ಆ ಕೆಲಸ ಮಾರ್ಚ್ ೧೯೯೦ಕ್ಕೆ ಪೂರ್ತಿಯಾಯಿತು. ಮತ್ತೆ ಇತ್ತೀಚೆಗೆ ಯಾವ ಪಂಪ್‌ನಿಂದ, ಸಂಪಿನಿಂದ

ನೀರನ್ನು ಒವರ್ ಹೆಡ್ ಟ್ಯಾಂಕ್‌ಗೆ ತೆಗೆದುಕೊಂಡು ಹೋಗುತ್ತಿದ್ದರು ಆದು ಕೆಟ್ಟು ಹೋಗಿ ಜನ ಬಹಳ ತೊಂದರೆಗೆ ಗುರಿಯಾದರು. ಅದನ್ನು ಯಾರು ರಿಪೇರಿ ಮಾಡಬೇಕೆಂದು ವಾದ ನಡೆದು ಈಗ ಸರಿ ಮಾಡಿದ್ದೇವೆ. ಜಿಲ್ಲಾ ಪರಿಷತ್ತು ಇಂಜಿನಿಯರಿಂಗ್ ಡಿವಿಜನ್‌ನವರು ಅವರೇ ಇದನ್ನು ರಿಪೇರಿ ಮಾಡಿ ಎಲೆಕ್ಟ್ರಿಸಿಟಿ ಚಾರ್ಜ್ ಮತ್ತು ಆಪರೇಷನ್ ಚಾರ್ಜಸ್ ಕಟ್ಟಿದ್ದಾರೆ. ಇನ್ನು ಮೂರು ದಿವಸಗಳಲ್ಲಿ ಅಥವಾ ಒಂದು ವಾರದಲ್ಲಿ ಈ ತೊಂದರೆ ಆ ಊರಿನಲ್ಲಿ ಇರುವುದಿಲ್ಲ.

vii) ಕಂಪ್ಟಗಿ ತಾಲ್ಲೂಕಿನಲ್ಲಿ ಭಾರಿ ಮಳೆಯಿಂದ ಕೆರೆ ಒಡೆದಂ ರೈತರ ಜಮೀನು ಕೊಚ್ಚಿಹೋಗಿರುವುದಂ.

ಶ್ರೀ ಹನುಮಗೌಡ (ಕುಷ್ಟಗಿ).—ಮಾನ್ಯ ಅಧ್ಯಕ್ಷರೇ, ಕುಷ್ಟಗಿ ತಾಲ್ಲೂಕಿನ ಕೊಡತಗೇರಾ ಹಾಗೂ ಬಳೇಕಲ್ಲ ಗ್ರಾಮದಲ್ಲಿ ಮೊನ್ನೆ ಬಿದ್ದ ಭಾರಿ ಮಳೆಯಿಂದಾಗಿ ಕೊಡತಗೇರಾ ಗೋಕಟ್ಟಿ ಕೆರೆ ಒಡೆದು ಎರಡು ಗ್ರಾಮಗಳಲ್ಲಿ ಸಣ್ಣ ರೈತರ ಜಮೀನು ಕೊಚ್ಚಿ ಹೋಗಿ ಬಿತ್ತಿದ ಬೀಜ, ಗೊಬ್ಬರ ನಾಶವಾಗಿ ರೈತರು ಕಂಗಾಲಾಗಿದ್ದಾರೆ, ಹತ್ತು ಹನ್ನೆರಡಂ ವರ್ಷಗಳ ಭೀಕರ ಬರಗಾಲದಿಂದ ತತ್ತರಿಸಿ ಹೋಗಿದ್ದ ರೈತರು ಆನಾಥರಾಗಿದ್ದಾರೆ. ಇದರಲ್ಲಿ ಎಲ್ಲಾ ಸಣ್ಣ ರೈತರೇ ಇದ್ದಾರೆ. ಮುಂದೆ ಅವರಿಗೆ ಸರ್ಕಾರದಿಂದ ಪರಿಹಾರ ಕೊಟ್ಟು ಜೀವನೋಪಾಯ ಕಲ್ಪಿಸುವಿರೆಂದು ನಾನಂ ಕೆಂದಾಯ ಸಚಿವರನ್ನು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್ (ಕಂದಾಯ ಹಾಗೂ ಕಾರ್ಮಿಕ ಸಚಿವರು).—ಮಾನ್ಯ ಅಧ್ಯಕ್ಷರೇ, ದಿನಾಂಕ ೧೮-೬-೧೯೯೦ರಂದು ಕುಷ್ಟಗಿ ತಾಲ್ಲೂಕಿನಲ್ಲಿ ಉಂಟಾಗಿದ್ದ ಅತೀವೃಷ್ಟಿಯಿಂದಾಗಿ, ಒಂದು ಗೋಕಟ್ಟಿ ಒಡೆದಿದ್ದು, ಮೂರು ಗ್ರಾಮಗಳ ರೈತ ಕುಟುಂಬಗಳು ನಷ್ಟವನ್ನು ಅನುಭವಿಸಿರುತ್ತಾರೆ. ವಿವರಗಳು ಈ ಕೆಳಕಂಡಂತೆ ಇರುತ್ತವೆ :—

		ಕೊಡತಗೆರ	ಬಿಳಿಕಲ್ಲು	ರಂಗಾಪುರ
ಅ)	ಹಾನಿಗೊಳಗಾದ ಜಮೀನಿನ ವಿಸ್ತೀರ್ಣ	೯೦ ಎಕರೆ ೩೯ ಗುಂಟೆ	೪೮ ಎಕರೆ ೩೫ ಗುಂಟೆ	೭೧ ಎಕರೆ ೨೦ ಗುಂಟೆ
ಆ)	ಬಿತ್ತನೆ ಬೀಜದ ಹಾನಿ	೧.೨೦ ಲಕ್ಷ ರೂ.	೧.೨೩ ಲಕ್ಷ ರೂ.	೦.೯೭ ಲಕ್ಷ ರೂ.
ಇ)	ಹಾನಿಗೊಳಗಾದ ರೈತ ಕುಟುಂಬಗಳ ಸಂಖ್ಯೆ	೬೭	೩೩	೪೧

ಮೇಲ್ಕಂಡಂತೆ ಹಾನಿಗೊಳಗಾದ ಪ್ರತಿ ಕುಟುಂಬದ ವಾರ್ಷಿಕ ಆದಾಯ, ಅನುಭವಿಸಿರುವ ನಷ್ಟ ಇತ್ಯಾದಿ ಕುರಿತ ವಿವರಗಳನ್ನು ಪಡೆಯಲಾಗುತ್ತಿದ್ದು, ಎಲ್ಲಾ ವಿವರಗಳನ್ನೂ ಕ್ರೋಡೀಕರಿಸಿ, ನಂತರ ನಿಯಮಾವಳಿಗಳ ಪ್ರಕಾರ ಅರ್ಹ ಸಂತ್ರಸ್ತರಿಗೆ ಪರಿಹಾರವನ್ನು ನೀಡುವ ಕ್ರಮವನ್ನು ಜಿಲ್ಲಾಧಿಕಾರಿ, ರಾಯಚೂರು ಇವರು, ಜಿಲ್ಲಾ ಕೃಷಿ ಅಧಿಕಾರಿಯವರ ಜೊತೆ ಚರ್ಚಿಸಿ ಕೈಗೊಳ್ಳುತ್ತಾರೆ. ತ್ವರಿತವಾಗಿ ಪರಿಹಾರವನ್ನು ನೀಡುವ ಕ್ರಮವನ್ನು ಕೈಗೊಳ್ಳಬೇಕಾಗಿ ಜಿಲ್ಲಾಧಿಕಾರಿಯವರಿಗೆ ಈಗಾಗಲೇ ಆದೇಶವನ್ನು ನೀಡಿದೆ.

viii) ಹಾಸನದ ಶ್ರೀಮತಿ ಎಲ್.ವಿ. ಪಾಲಿಟೆಕ್ನಿಕ್‌ನಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ಕೋರ್ಸನ್ನು ಪ್ರಾರಂಭಿಸುವುದು.

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಹಾಸನದ ಶ್ರೀಮತಿ ಎಲ್.ವಿ. ಪಾಲಿಟೆಕ್ನಿಕ್‌ನಲ್ಲಿ ಮೂರು ವರ್ಷಗಳ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ಕೋರ್ಸನ್ನು ಪ್ರಾರಂಭಿಸಲು ಒಂದಂ ಸ್ಕೀಮ್ ತಯಾರಾಗಿದ್ದು ಇದರ ಬಾಬ್ತು ವಿಶ್ವಬ್ಯಾಂಕಿನಿಂದ ಸುಮಾರು ನಾಲ್ಕು ಕೋಟಿ ರೂಪಾಯಿ ಹಣವೂ ಸಹ ಮಂಜೂರಾಗಿರುವುದಾಗಿ ತಿಳಿಯಿತರ. ಈ ಕೋರ್ಸನ್ನು ನಡೆಸಲು ಬೇಕಾದ ಕಟ್ಟಡದ ಅನುಕೂಲವಿದೆ, ಸಿಬ್ಬಂದಿ ವರ್ಗದವರೂ ಇದ್ದಾರೆ, ಲೇಖನಿ ಮತ್ತು ಇತರೆ ಉಪಕರಣಗಳನ್ನು ಸಹ ಕೊಂಡುಕೊಳ್ಳಲಾಗಿದೆ. ಇನ್ನೇನು ಕೋರ್ಸ್ ಪ್ರಾರಂಭಿಸಬೇಕೆನ್ನುವಾಗ ಟೆಕ್ನಿಕಲ್ ಡೈರೆಕ್ಟರ್‌ವರು ಕೋರ್ಸನ್ನು ಹಿಂತೆಗೆದುಕೊಂಡಿದ್ದು ಈ ಭಾಗದ ವಿದ್ಯಾರ್ಥಿಗಳಿಗೆ ತುಂಬಾ ಅನ್ಯಾಯವಾಗಿದೆ. ಈ ಕೋರ್ಸನ್ನು ತಕ್ಷಣ ಪ್ರಾರಂಭಿಸಬೇಕೆಂದು ಮಾನ್ಯ ವಿದ್ಯಾ ಸಚಿವರ ಗಮನ ಸೆಳೆಯುತ್ತೇನೆ.